2ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

ಸಿ.ಸಿ.ನಂಃ 16498 ಃ 2020

| | | | |
|---|---|---|---|
| ಸಾಕ್ಷಿದಾರರ ಹೆಸರು | ಸುನಿಲ್ ಕುಮಾರ್ | ಸಿ ಡಬ್ಲ್ಯು | 1 |
| ತಂದೆಯ ಹೆಸರು | ಸಿದ್ದಯ್ಯ | ಪಿ ಡಬ್ಲ್ಯು | 1 |
| ವಯಸ್ಸು | 38 ವರ್ಷ | | |
| ಉದ್ಯೋಗ | ಖಾಸಗಿ ಕೆಲಸ | | |
| ವಾಸಸ್ಥಾನ | ಕಾವೇರಿನಗರ, ಬೆಂಗಳೂರು | | |

ಪ್ರಮಾಣ ವಚನ ಬೋಧಿಸಿದ ದಿನಾಂಕ ಃ 22.06.2026

ಮುಖ್ಯ ವಿಚಾರಣೆ ಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ-

ಚಾಸಾ 4 ರವರು ವೆಂಕಟೇಶ್ವರ ವೈನ್ಸ್ ನ ಮಾಲೀಕರು. ನಾನು ಅಲ್ಲಿ ಕ್ಯಾಶಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. 2020 ರಲ್ಲಿ ಕರೋನ ಟೈಮ್ ನಲ್ಲಿ ನಾನು ಊರಿಗೆ ಹೋಗಿದ್ದೆ. 23.03.2020 ರಂದು ವೈನ್ಸ್ ಸ್ಟೋರ್ ನ ಬಾಗಿಲು ಹಾಕಿಕೊಂಡು ಹೋಗಿರುತ್ತೇನೆ. ಪಕ್ಕದ ಮನೆಯವರು ವೈನ್ಸ್ ಸ್ಟೋರ್ ಬಾಗಿಲು ತೆರೆದಿದೆ ನಾಯಿ ಹೋಗುತ್ತಿದೆ ಎಂದು ನನಗೆ ಫೋನ್ ಮಾಡಿ ಹೇಳಿದರು. ದಿಃ 02.05.2020 ರಂದು ನಾನು ರಾತ್ರಿ 10.00 ಗಂಟೆ ನಂತರ ಬಂದು ನೋಡಿದಾಗ ಬಾಗಿಲು ತೆರೆದಿತ್ತು, ಮದ್ಯವು ಕಳ್ಳತನವಾಗಿತ್ತು. 5,70,000/- ಮದ್ಯವು ಕಳ್ಳತನವಾಗಿತ್ತು. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದೆನು. ಅದನ್ನು ನಿಪಿ-1 ಹಾಗೂ ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ-1ಎ ಎಂದು ಗುರ್ತಿಸಿದ್ದೇನೆ. ನಾನು ದೂರು ನೀಡಿದ ನಂತರ ಪೊಲೀಸರು 03.05.2020 ರಂದು ಸ್ಥಳಕ್ಕೆ ಬಂದು ಬೆಳಿಗ್ಗೆ 11.00 ರಿಂದ 12.00 ಗಂಟೆಯವರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮ ಮಹಜರ್ ಮಾಡಿದರು. ಅದರಲ್ಲಿ ಪೊಲೀಸರು ನನ್ನ ಸಹಿ ಪಡೆದುಕೊಂಡರು ಅದನ್ನು ನೋಡಿ ಗುರ್ತಿಸುತ್ತಿದ್ದೇನೆ. ಅದನ್ನು ನಿಪಿ-2 ಹಾಗೂ ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ-2ಎ ಎಂದು ಗುರ್ತಿಸಿದ್ದೇನೆ. 84 ವಿವಿಧ ಮದ್ಯ ಇರುವ ಬಾಟಲ್ ಗಳ ಕಳ್ಳತನವಾಗಿರುತ್ತದೆ. ಸಾಕ್ಷಿಯು ಮದ್ಯದ ಲೀಸ್ಟ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಹಾಗೂ ಅದರಲ್ಲಿ ಇರುವ ನನ್ನ ಸಹಿಯನ್ನು ನಿಪಿ-3ಎ ಎಂದು ಗುರ್ತಿಸಿದ್ದೇನೆ. ಪೊಲೀಸರು 4000/- ಹಣ ಸಿಕ್ಕಿರುತ್ತದೆ ಎಂದು ಹೇಳಿರುತ್ತಾರೆ. ಸಲೀಂ ಎಂಬ

4ನೇ ಆರೋಪಿಯನ್ನು ತೋರಿಸಿರುತ್ತಾರೆ. ಉಳಿದ ಆರೋಪಿತರನ್ನು ತೋರಿಸಿರುವುದಿಲ್ಲ. 4ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಪೊಲೀಸರು ಠಾಣೆಗೆ ಕರೆಯಿಸಿ ಹಣವನ್ನು ತೋರಿಸಿರುವುದಿಲ್ಲ.

<u>ಪಾಟೀ ಸವಾಲುಃ 1ನೇ ಆರೋಪಿ ಪರ ವಕೀಲರಿಂದಃ</u>

ಇಲ್ಲ

( ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ

(ಸಾಹೀಲ್ ಅಹ್ಮದ್ ಎಸ್ ಕುನ್ನಿಭಾವಿ)
2ನೇ ಅ ಮು ನ್ಯಾ ದಂ.